**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 201/2024**

| | | | |
|---|---|---|---|
| ಹೆಸರು | | ಶ್ರೀಮತಿ ಮಂಗಳಗೌರಿ | ಚಾಸಾಃ 04 |
| ಗಂಡನ ಹೆಸರು | | ಶ್ರೀ ಬಸವಣ್ಣ | ಫ್ರಾಸಾಃ 08 |
| ವಯಸ್ಸು | | 35 ವರ್ಷ | ಸಾಕ್ಷಿಯನ್ನು ದಿನಾಂಕಃ 23.06.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ಕೂಲಿ | |
| ವಾಸ | | ಚಿಕ್ಕ ಬೇಗೂರು ಗ್ರಾಮ | |

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–</u>**

ಚಾಸಾ–1 ಮತ್ತು 2 ನನಗೆ ಗೊತ್ತು. ಆರೋಪಿಗಳು ನನಗೆ ಗೊತ್ತು. ನಾನು ಹಾಲು ಕರೆಯುತ್ತಿದ್ದಾಗ ಆರೋಪಿಗಳು ಚಾಸಾ–1 ಮತ್ತು 2 ರವರಿಗೆ ಬೈಯುತ್ತಿದ್ದರು. ಯಾವ ವಿಷಯಕ್ಕೆ ಬೈಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸುಮಾರು ಒಂದು ವರ್ಷಗಳ ಹಿಂದೆ ಬೈಯುತ್ತಿದ್ದರು. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**<u>ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ</u>**

ದಿಃ 26.11.2023 ರಂದು ಬೆಳಿಗ್ಗೆ 7.00 ಗಂಟೆಗೆ ನಮ್ಮ ಬೀದಿಯಲ್ಲಿ ಗಲಾಟೆ ಶಬ್ದ ಕೇಳಿಸುತ್ತಿತ್ತು ಎಂದರೆ ಸರಿ. ಆಗ ಆರೋಪಿಗಳು ಚಾಸಾ–1 ಮತ್ತು 2 ರವರನ್ನು ಪುಟ್ಟಮಾದಮ್ಮರವರ ಖಾಲಿ ನಿವೇತನದಲ್ಲಿ ಹಸುಗಳನ್ನು ಕಟ್ಟಿಹಾಕಬೇಡಿ ಎಂದು ಬೈಯುತ್ತಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಚಾಸಾ–1 ರವರು ಪುಟ್ಟಮಾದಮ್ಮರವರ ಅನುಮತಿ ಪಡೆದು ದನಗಳನ್ನು ಕಟ್ಟಿಹಾಕುತ್ತಿದ್ದೇವೆ ಎಂದು ಹೇಳಿದಾಗ ಒಂದನೇ ಆರೋಪಿ ತನ್ನ ಕೈಯಲ್ಲಿ

ಹಿಡಿದುಕೊಂಡಿದ್ದ ನೀಲಿ ಬಾಡ್ಲಿಯಿಂದ ಚಾಸಾ–2 ರವರ ತಲೆಗೆ ಮತ್ತು ಮೈಕೈಗೆ ಹೊಡೆದರು ಎಂದರೆ ಸರಿಯಲ್ಲ. ಪರಿಣಾಮ ಚಾಸಾ–2 ರವರು ತಲೆ ಮತ್ತು ಮೈಕೈಗೆ ಸಣ್ಣಪುಟ್ಟ ಗಾಯಗಳಾದವು ಎಂದರೆ ಸರಿಯಲ್ಲ. ಎರಡನೇ ಆರೋಪಿಯು ಸಹ ಚಾಸಾ–2 ರವರು ಮೈಕೈಗೆ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ. ಗಲಾಟೆ ಕಾಲಕ್ಕೆ ಚಾಸಾ–2 ರವರ ಕಪ್ಪು ಮಣಿ ಸರ ಮತ್ತು ತಾಳಿ ಕಿತ್ತುಹೋಗಿತ್ತು, ಅದು ಸಿಕ್ಕಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು, ಚಾಸಾ–1 ಮತ್ತು 3 ರವರು ಜಗಳ ಬಿಡಿಸಿದೇವು ಎಂದರೆ ಸರಿಯಲ್ಲ. ಗಾಯಗೊಂಡಿದ್ದ ಚಾಸಾ–2 ರವರನ್ನು ಚಾಸಾ–1 ರವರು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ–1 ರವರು ಆರೋಪಿಗಳ ವಿರುದ್ಧ ದೂರು ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 03.12.2023 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ7 ಎಂದು ಗುರುತಿಸಲಾಯಿತು. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಈ ಪ್ರಕರಣದ ಗಲಾಟೆಯ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಆರೋಪಿಗಳು ಬೈಯುತ್ತಿದ್ದ ವಿಷಯ ನನಗೆ ಖುದ್ದಾಗಿ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**